# ಕಥೋಪದೇಶ

# 'ಋಣ'ದ ಭಾರ

**ಒಂದು ಊರು.** ಅಲ್ಲೊಬ್ಬ ರೈತ. ಬೇಸಿಗೆಯ ಕಾಲ. ಮಳೆಯಿಲ್ಲದಿದ್ದರೂ ಬಾವಿಯಿಂದ ನೀರು ಹೊತ್ತು ತನ್ನ ಹೊಲದಲ್ಲಿ ಬದನೆ ಗಿಡ ಬೆಳೆಸಿದ್ದ. ಗೊಬ್ಬರ ಹಾಕಿ, ಕಳೆ ತೆಗೆದು ಗುಣಿ ಮಾಡಿ ತುಂಬ ಜತನದಿಂದ ಆರೈಕೆ ಮಾಡಿದ್ದ. ಶ್ರಮಕ್ಕೆ ತಕ್ಕ ಫಲ.ಬದನೆ ಗಿಡ ಹುಲಸಾಗಿ ಬೆಳೆಯಿತು. ಎಲೆಎಲೆಗೆ ಹೂ, ಮೈ ತುಂಬ ಕಾಯಿ—ಕಣ್ಣು ಕುಕ್ಕುವಂತೆ. ದೃಷ್ಟಿ ತಾಕದಿರಲೆಂದು ತನ್ನ ಮನೆಯಲ್ಲಿ ಹುಟ್ಟಿ ಬೆಳೆದು ಬದುಕಿ ಸತ್ತಿದ್ದ ಎತ್ತಿನ ತಲೆಬುರುಡೆಯನ್ನು ತಂದು ಊರುಗೋಲಿಗೆ ಸಿಕ್ಕಿಸಿದ. ಒಂದು ದಿನ ನಾಲ್ಕು ಜನ ಕಳ್ಳರು ಆ ಹಾದಿಯಲ್ಲಿ ಬಂದರು. ಬದನೆಗಿಡ ನೋಡಿದರು. ಅವರ ಬಾಯಲ್ಲಿ ನೀರೂರಿತು.ಮನಸ್ಸು ಅರಳಿತು. ಒಂದು ಕಾರೆಂಬ ಕಗ್ಗತ್ತಲು ರಾತ್ರಿ. ಗೋಣಿ ಚೀಲಗಳೊಂದಿಗೆ ಬಂದರು. ಕಾಯನ್ನು ಕೀಳುವಷ್ಟೂ ವ್ಯವಧಾನವಿರಲಿಲ್ಲ, 'ತರದು ತರದು' ತುಂಬುತ್ತಿದ್ದರು—ಅಷ್ಟೊಂದು ಕಾಯಕ ನಿಷ್ಠೆ ಅವರಿಗೆ! ಯಾರೋ ನಕ್ಕಂತಾಯಿತು. ಗಕ್ಕನೆ ಬೆಚ್ಚಿದರು, ಹೊಲದೊಡೆಯ ಬಂದನೆಂದು! ತಿರುಗಿ ನೋಡಿದರು. ಯಾರೂ ಇಲ್ಲ. ತಮ್ಮ ಕಾಯಕದಲ್ಲಿ ಮಗ್ನರಾದರು. ಮತ್ತೂ ನಕ್ಕಂತಾಯಿತು. ಸುತ್ತೆಲ್ಲಾ ನೋಡಿದರು. ಮನುಷ್ಯರಾರೂ ಅಲ್ಲಿಲ್ಲ. ಆದರೆ ಬೆಳ್ಳನೆಯ ವಸ್ತುವೊಂದು ಕಾರಿರುಳಿನಲ್ಲಿ ಕಣ್ಣಿಗೆ ಬಿತ್ತು—ಅವರ ಬಾಳ್ಗಬ್ಬದ ಭಾಗ್ಯದ ಜ್ಯೋತಿಯಂತೆ! ಬಳಿಹೋಗಿ ನೋಡಿದರು. ಎತ್ತಿನ ತಲೆಬುರುಡೆ. ಅದು ನಗುತ್ತಿತ್ತು! ಕಳ್ಳರಿಗೆ ಆಶ್ಚರ್ಯವಾಯಿತು. ಏಕೆ ನಗುತ್ತಿರುವೆ ಎಂದು ಗದರಿಸಿದರು. ಅದು 'ಏನಿಲ್ರಪ್ಪಾ, ನಿಮ್ಮನ್ನು ನೋಡಿ ನಗು ಬಂತು, ಅದಕ್ಕಾಗಿ ನಕ್ಕೆ' ಎಂದಿತು. 'ಯ್ಯಾಕೆ ನಗ್ತಾಯಿದ್ದೀಯ ಹೇಳು ಹೇಳು' ಎಂದು ಒತ್ತಾಯಿಸಿದರು. ಎತ್ತಿನ ತಲೆಬುರುಡೆ ಹೇಳಿತು :

'ನಾನು ಹಿಂದಿನ ಜನ್ಮದಲ್ಲಿ ನಾಗರಹಾವಾಗಿ ಹುಟ್ಟಿದ್ದೆ. ಹೀಗೆ ಬೇಸಿಗೆಯ ಕಾಲ. ಬಿಸಿಲಿನ ಬೇಗೆ ತಾಳಲಾರದೆ ನನ್ನ ನಾಲಗೆ ಹೊರಗೆ ಹಾಕಿಕೊಂಡು ಈ ರೈತನ ಹೊಲದಲ್ಲಿ ಹರಿದು ಹೋಗ್ತಾಇದ್ದೆ. ಈ ರೈತ ಹುಚ್ಚೆಳ್ಳು ಹಾಕಿದ್ದ. ಬಿಸಿಲಿನ ಬೇಗೆಗೆ ಎಳ್ಳಿನ ಗಿಡದಿಂದ ಒಂದು ಎಳ್ಳು ಸಿಡಿದು ನನ್ನ ಬಾಯಿಗೆ ಬಿತ್ತು. ನನ್ನ



ಕಲೆ : ಶ್ರೀಕಾಂತ

ಹೊಟ್ಟೆ ಒಳಗೆ ಹೋಯ್ತು. ಆ ಎಳ್ಳು ತಿಂದಿದ್ದರಿಂದ ಮುಂದಿನ ಜನ್ಮದಲ್ಲಿ ನಾನು ಈ ರೈತನ ಮನೆಯಲ್ಲಿ ಎತ್ತಾಗಿ ಹುಟ್ಟಿ ಇಪ್ಪತ್ತು ವರ್ಷ ಗೇದರೂ ಇನ್ನೂ ಋಣ ತೀರಿಲ್ಲ. ಈಗ ಅವನ ಹೊಲ ಕಾಯ್ತಾ ಇದ್ದೀನಿ. ನೀವು ಇಷ್ಟೊಂದು ಕಾಯಿ ಕೀಳ್ತಾ ಇದ್ದೀರಲ್ಲ. ನಿಮಗೆ ಈ ಋಣ ತೀರಿಸಬೇಕಾದರೆ ಎಷ್ಟು ಜನ್ಮ ಬೇಕು ಅಂತ ಯೋಚಿಸ್ತಾ ಇದ್ದೆ. ನಗು ಬಂತು. ಅದ್ಕೆ ನಕ್ಕೆ

ಕಳ್ಳರಿಗೆ ತಮ್ಮ ತಪ್ಪಿನ ಅರಿವಾಗಿ ಪಶ್ಚಾತ್ತಾಪ ಪಟ್ಟುಕೊಂಡು ಹೊರಟು ಹೋದರು. ಇದು ಒಂದು ಜನಪದ ಕಥೆ!

**ಸಂಗ್ರಹ : ಡಿ.ಕೆ. ಈರೇಗೌಡ**